ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1159 /2023 .

ಫ್ರಾ.ಸಾ. : 4
ಚಾ.ಸಾ. : 6

| | | |
|---|---|---|
| ಹೆಸರು | : | ಪ್ರವೀಣ್ ಬಿ. ವಿ. |
| ತಂದೆಯ ಹೆಸರು | : | ಲೇಟ್ ವಾಸು |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ |
| ವಿಳಾಸ | : | ಗೋಣಿಕೊಪ್ಪ |

... ............................................................................................. ...

ದಿನಾಂಕ 29 ನೇ ಮಾರ್ಚ್ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

1. ನಾನು 2015 ಮೇ ರಿಂದ 2019 ಜನವರಿ ತನಕ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ- 09.07.2017 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ಚಾಸಾ 9 ರವರ ನಿರ್ದೇಶನದಂತೆ ಪೊ. ಠಾಣಾ ಪ್ರಕರಣದ ಸಂಖ್ಯೆ 66/2016 ರ ಪ್ರಕರಣದಲ್ಲಿ ಆರೋಪಿ ಪತ್ತೆ ಬಗ್ಗೆ ನನ್ನನ್ನು ನೇಮಿಸಿದ್ದು, ನಾನು ಬೆಸಗೂರು ಗ್ರಾಮದ ಜಯಂತಿ ಕಾಲೋನಿಗೆ ಹೋಗಿ ಆರೋಪಿ ಗಿರೀಶ್ ರವರ ಬಗ್ಗೆ ಮಾಹಿತಿಯನ್ನು ಅಲ್ಲಿನ ನಿವಾಸಿಗಳಾದ ಜಯ, ಕಾಮರಾಜು, ವೆಂಕಟೇಶ್ ರವರನ್ನು ವಿಚಾರಿಸಲಾಗಿ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ನಂತರ ಗ್ರಾಮಸ್ಥರಾದ ಅರಮನಮಡ ಶಿಬಿಲ್ ಕುಮಾರ್, ಚಿಪ್ಪಣ್ಣ, ಮತ್ತು ನಟೇಶ್ ರವರನ್ನು ವಿಚಾರಿಸಲಾಗಿ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ನಂತರ ವಾಪಸ್ ಠಾಣೆಗೆ ಬಂದು ತನಿಖಾಧಿಕಾರಿಗಳ ಮುಂದೆ ವರದಿ ನೀಡಿರುತ್ತೇನೆ.

3. ದಿ. 30.07.2017 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ಚಾಸಾ 9 ರವರ ನಿರ್ದೇಶನದಂತೆ ಪೊ. ಠಾಣಾ ಪ್ರಕರಣದ ಸಂಖ್ಯೆ 66/2016 ರ

ಪ್ರಕರಣದಲ್ಲಿ ಆರೋಪಿ ಪತ್ತೆ ಬಗ್ಗೆ ನನ್ನನ್ನು ನೇಮಿಸಿದ್ದು, ನಾನು ಬೆಸಗೂರು ಗ್ರಾಮದ ಜಯಂತಿ ಕಾಲೋನಿಗೆ ಹೋಗಿ ಆರೋಪಿ ಗಿರೀಶ್ ರವರ ಬಗ್ಗೆ ಮಾಹಿತಿಯನ್ನು ಅಲ್ಲಿನ ನಿವಾಸಿಗಳಾದ ಶಂಭು, ಕಾವೇರಪ್ಪ ರಾಬೀನ್ ಬೋಪಣ್ಣ ರವರನ್ನು  ವಿಚಾರಿಸಲಾಗಿ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ನಂತರ ಜಯಂತಿ ಕಾಲೋನಿ, ಅಯ್ಯಪ್ಪ ಕಾಲೋನಿಗೆ ಹೋಗಿ ಆರೋಪಿ ಗಿರೀಶ್ ರವರ ಬಗ್ಗೆ ಮಾಹಿತಿ ವಿಚಾರಿಸಲಾಗಿ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ.  ನಂತರ ಬೆಸಗೂರು ಗ್ರಾಮದ ಪಕ್ಕದ ಗ್ರಾಮವಾದ ಬೆಕ್ಕೆಸೊಡ್ಲೂರು ಗ್ರಾಮದಲ್ಲಿ ಆರೋಪಿ ಗಿರೀಶ್ ರವರ ಬಗ್ಗೆ ಮಾಹಿತಿ ವಿಚಾರಿಸಲಾಗಿ ಗ್ರಾಮಸ್ಥರಾದ ಬನ್ನಿಮಾಡ ಸುರೇಶ, ಅರುಣ ಹಾಗೂ ಧನುಜ ರವರನ್ನು ವಿಚಾರಿಸಲಾಗಿ ಆರೋಪಿ ಗಿರೀಶ್ ರವರ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ನಂತರ ವಾಪಸ್ ಠಾಣೆಗೆ ಬಂದು ತನಿಖಾಧಿಕಾರಿಗಳ ಮುಂದೆ ವರದಿ ನೀಡಿರುತ್ತೇನೆ.

4. ಸಾಕ್ಷಿಯು ಆರೋಪಿತರ ಪತ್ತೆಗಾಗಿ ಹೋಗಿ ನೀಡಿರುವ ವರದಿಗಳನ್ನು  ನೋಡಿ ಗುರುತಿಸಿದ್ದು ಅದನ್ನು  ನಿ. ಪಿ. 1 ಮತ್ತು ನಿ. ಪಿ. 2 ಎಂದು  ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ. ಪಿ. 1(ಎ) ಮತ್ತು ನಿ. ಪಿ. 2(ಎ) ಎಂದು ಗುರುತಿಸಲಾಯಿತು.
ಮುಖ್ಯ ವಿಚಾರಣೆ ಃ ಮುಕ್ತಾಯ.

<u>ಪಾಟೀ ಸವಾಲು</u> :- ಆರೋಪಿ ಪರ  ಶ್ರೀ ಎಂ. ಹೆಚ್. ಎನ್ ವಕೀಲರವರಿಂದ :-

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಲಾಗಿ ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)